# 2023-24ನೇ ಶೈಕ್ಷಣಿಕ ವರ್ಷದ ಅರಳು ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆಯ


## ವಾರ್ಷಿಕ ವರದಿ





ಅರಳು ವಿಶೇಷ ಶಾಲೆಗೆ ಅಂಬಾ ಸಂಸ್ಥೆ ಬೆಂಗಳೂರು ಇವರು ದಿನಾಂಕ:14/04/2023 ರಂದು ವೃತ್ತಿಪೂರ್ವ ತರಬೇತಿಗಾಗಿ 20 ಲ್ಯಾಪ್ ಟಾಪ್ ಗಳನ್ನು ವಿತರಿಸಿದರು.



ಅರಳು ವಿಶೇಷ ಶಾಲೆಯ ವೃತ್ತಿಪೂರ್ವ ವಿಭಾಗದ ವಿಧ್ಯಾರ್ಥಿಗಳು ಕಂಪ್ಯೂಟರ್ ತರಬೇತಿ ಪಡೆಯುತ್ತಿರುವುದು.







ದಿನಾಂಕ:23/04/2023 ರಂದು **ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು** ಸರಳವಾಗಿ ಆಚರಿಸಿದೆವು.



**01/06/2023 ರಂದು ನಮ್ಮಶಾಲೆಯ ಸಹಾಯಕಿಯಾದ ಶ್ರೀಮತಿ ಗೌರವ್ವ ಹಿರೇಮಠ ಇವರ ಹುಟ್ಟುಹಬ್ಬವನ್ನು ಮಕ್ಕಳಿಗೆ ವಿಶೇಷ ಸಿಹಿ ಬೋಜನ ನೀಡಿ ಸಸಿ ನೆಟ್ಟು ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಯಿತು.**

**ಅರಳು ವಿಶೇಷ ಶಾಲೆಗೆ ಹೊಸದಾಗಿ ದಾಖಲಾದ ಮಕ್ಕಳನ್ನು ಹೂ ಸಿಹಿ ವಿತರಿಸಿ ಸ್ವಾಗತಿಸಲಾಯಿತು.**





05/06/2023 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಎಲ್ಲವಿಶೇಷ ಮಕ್ಕಳಿಂದ ಸಸಿ ನೆಡುವ ಮೂಲಕ ವಿಶಿಷ್ಟವಾಗಿ ಆಚರಣೆ ಮಾಡಿದೆವು.



ದಿನಾಂಕ:12/06/2023 ರಂದು ನಮ್ಮ ಶಾಲೆಯ ಮುದ್ದು ವಿಧ್ಯಾರ್ಥಿನಿಯಾದ ಕುಮಾರಿ ಅಲ್ಪಿಯಾ ಇವಳ ಹುಟ್ಟುಹಬ್ಬವನ್ನು ಮಕ್ಕಳಿಗೆ ಸಿಹಿ ವಿತರಿಸಿ ಕೆಕ್ ಕತ್ತ್ರರಿಸುವ ಮೂಲಕ ಆಚರಣೆ ಮಾಡಲಾಯಿತು.




ದಿನಾಂಕ:15/06/2023 ರಂದು ಅರಳು ವಿಶೇಷ ಶಾಲೆಯ ಶಿಕ್ಷಕಿಯಾದ ಶ್ರೀಮತಿ ಅಕ್ಕಮ್ಮ ಕೊರದಾಳ ಇವರ ಹುಟ್ಟುಹಬ್ಬವನ್ನು ಆಚರಣೆ ಮಾಡಲಾಯಿತು.




ಶ್ರೀಮತಿ ಅಕ್ಕಮ್ಮ ಕೋರದಾಳ ಇವರ ತಮ್ಮ ಹುಟ್ಟುಹಬ್ಬವನ್ನು ಮಕ್ಕಳಿಗೆ ವಿಶೇಷ ಬೋಜನ ನೀಡಿ ಸಂಭ್ರಮಿಸಿದರು.

ದಿನಾಂಕ: 20/06/2023 ರಂದು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಗದಗ ಇವರ ಸಹಯೋಗದೊಂದಿಗೆ ನೂತನವಾಗಿ ದಾಖಲಾದ ಮಕ್ಕಳ ಬುದ್ದಿಮಟ್ಟ ತಪಾಸಣೆ ಹಾಗೂ ಮಾತಿನ ತರಬೇತಿ ಅಗತ್ಯವಿರುವ ವಿಶೇಷ ಮಕ್ಕಳಿಗೆ ದೈಹಿಕ ವ್ಯಾಯಾಮ ತರಬೇತಿ ನೀಡಿದರು.










ಲಕ್ಷ್ಮೇಶ್ವರದ ಅರಳು ಬುದ್ಧಿಮಾಂದ್ಯ ಮಕ್ಕಳ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಶಾಲೆಯ ಮಕ್ಕಳಿಗೆ ಎಂ.ಕೆ. ಕಳ್ಳಿಮಠ ದಂಪತಿ ಟಿ ಶರ್ಟ್ ವಿತರಿಸಿದರು. ಶಿಕ್ಷಕಿ ಅಕ್ಕಮ್ಮ ಕೋರದಾಳ ಇದ್ದರು.

**ದಿನಾಂಕ: 21/06/2023 ರಂದು ವಿಶೇಷ ಮಕ್ಕಳ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.**




ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ನೀಲಮ್ಮ ದಾಸಪ್ಪನವರ ಮುಖ್ಯ ಅಧಿತಿಗಳಾಗಿ ಶ್ರೀಯುತ ಎಮ್ ಕೆ ಕಳ್ಳಿಮಠ ,ಪಾರ್ವತಿ ಕಳ್ಳಿಮಠ ಅಧಿತಿಗಳಾಗಿ ಯೋಗ ಗುರುಗಳಾದ ಶ್ರೀ ಚನ್ನಪ್ಪ ಬೇವಿನಕಟ್ಟಿ ಹಾಗೂ ಮಹಾಂತೇಶ ಜೋಗೇರ ವಹಿಸಿದ್ದರು.ಯೋಗ ದಿನಾಚರಣೆ ಪ್ರಯುಕ್ತ ಎಮ್ ಕೆ ಕಳ್ಳಿಮಠ ದಂಪತಿಗಳು37 ವಿಶೇಷ ಮಕ್ಕಳಿಗೆ ಬಿಳಿ ಬಣ್ಣದ ಟೀ ಶರ್ಟ ವಿತರಿಸಿ ಅರಳು ವಿಶೇಷ ಮಕ್ಕಳ ಶಾಲೆಯ ಕಾರ್ಯ ನಮಗೆ ಸಂತಸ ತಂದಿದ್ದುಸಂಸ್ಥೆಯು ಸಾಕಷ್ಟು ಉತ್ತಮ ಸೇವೆಗಳನ್ನು ಇಲಾಖೆಯ ಅನುದಾನವಿಲ್ಲದೆ ನಡೆಸುತ್ತಿರುವುದು ನಮಗೆ ಸಂತಸ ತಂದಿದೆ ವಿಶೇಷ ಶಾಲೆಯಲ್ಲಿ ಮಕ್ಕಳಿಗೆ ದೈನಂದಿನ ಚಟುವಟಿಕೆಗಳ ನಿರ್ವಹಣೆ ಜೋತೆಗೆ ಮಕ್ಕಳಿಗೆ ವೃತ್ತಿತರಬೇತಿಗಳಾದ ಕಂಪ್ಯೂಟರ ಹೋಲಿಗೆ,ಹೂ,ಹೂಮಾಲೆ ತಯಾರಿಕೆ ಫಿನಾಯಿಲ್ ತಯಾರಿಕೆ,ಆಭರಣಗಳ ತಯಾರಿಕೆ ಇಂತಹ ವಿಶೇಷ ಮಕ್ಕಳಿಗೆ ಕಂಪ್ಯೂಟರ್ ತರಬೇತಿ ನೀಡುತ್ತಿರುವುದು ಶ್ಲಾಘನೀಯ ಇಂತಹ ಸಂಸ್ಥೆಗಳಿಗೆ ಇಲಾಖೆ ಹಾಗೂ ಲಕ್ಷ್ಮೇಶ್ವರದ ಜನತೆ ಸಹಾಯ ಸಹಕಾರ ನೀಡುವ ಮೂಲಕ ಸಂಸ್ಥೆ ಸಹಕಾರ ನೀಡುವುದು ನಮ್ಮ ಕರ್ತವ್ಯ ಎಂದರು.ಮಹಾಂತೇಶ ಜೋಗೆರ ಮಾತನಾಡಿ ಕಳ್ಳಿಮಠ ದಂಪತಿಗಳು ಟೀ ಶರ್ಟ ನೀಡಿರುವುದು ಸಂತಸ ತಂದಿದೆ ಬೇಡುವ ಜಂಗಮರನ್ನು ನೋಡಿದ್ದೆನೆ ನೀಡುವ ಜಂಗಮರನ್ನು ಇಂದು ನೋಡಿ ಸಂತಸವಾಯಿತು ಎಂದರು. ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ನೀಲಮ್ಮ ದಾಸಪ್ಪನವರ ಮಾತನಾಡಿ ಸರ್ವರಿಗೂ


ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಶುಭಾಷಯಗಳು ಹಾಗೆ ನಮ್ಮ ವಿಶೇಷ ಮಕ್ಕಳಿಗೆ ಕಳ್ಳಿಮಠ ದಂಪತಿಗಳು ಟೀ ಶರ್ಟ ವಿತರಿಸಿದ್ದು ಅವರಿಗೆ ಸಂಸ್ಥೆಯ ಪರವಾಗಿ ತುಂಬು ಹೃದಯದ ಧನ್ಯವಾದಳನ್ನು ತಿಳಿಸುತ್ತಾ .ಸಂಸ್ಥೆಯು ಕಳೆದ ಎಂಟು ವರ್ಷಗಳಿಂದ ಇಲಾಖೆಯ ಅನುದಾನವಿಲ್ಲದೆ ವಿಶೇಷ ಮಕ್ಕಳಿಗೆ ಉಚಿತವಾಗಿ ವಿಶೇಷ ಶಿಕ್ಷಣ ವೃತ್ತಿಪೂರ್ವ ತರಬೇತಿಗಳನ್ನು ನೀಡುತ್ತಾ ಬಂದಿದ್ದು ಲಕ್ಷ್ಮೇಶ್ವರ ತಾಲ್ಲೂಕಿನಾಧ್ಯಂತ 246 ವಿಶೇಷ ಮಕ್ಕಳಿದ್ದು ಈ ಎಲ್ಲಾ ವೀಶೇಷ ಮಕ್ಕಳನ್ನು ಶೈಕ್ಷಣಿಕ ವ್ಯಾಪ್ತಿಗೆ ಒಳಪಡಿಸಲು ತಮ್ಮೆಲ್ಲರ ಸಹಾಯ ಸಹಕಾರ ಅಗತ್ಯವೆಂದರು. ಯೋಗ ಶಿಕ್ಷಕರು ಮಾತನಾಡಿ ಸಂಸ್ಥೆಯು ಅನೇಕ ಸಮಾಜಮುಖಿ ಕಾರ್ಯನಿರ್ವಹಿಸುತ್ತಾ ಬಂದಿದ್ದು ಲಕ್ಷ್ಮೇಶ್ವರಕ್ಕೆ ಹೆಮ್ಮೆಯ ವಿಚಾರ ಇಂದು ವಿಶೇಷ ಮಕ್ಕಳಿಗೆ ಯೋಗ ತರಬೇತಿ ನೀಎಇರುವುದು ಸಂತಸ ತಂದಿದೆ ಯೋಗವು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡಲು ಸಹಾಯಕವಾಗುತ್ತದೆ ಹಾಗಾಗಿ ಪ್ರತಿಯೋಬ್ಬರು ಯೋಗ ಮಾಡಿ ನಿರೋಗಿಯಾಗಿ ಎಂದು ತಿಳಿಸಿದರು.





ಗುರುಪೌರ್ಣಿಮಾ ಪ್ರಯುಕ್ತ ಗುರು ಪುಟ್ಟರಾಜರಿಗೆ ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಶ್ರೀಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.ನಂತರ ಗುರುವಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ನಿವೃತ್ತ ಶಿಕ್ಷಕಿಯರಾದ ಶ್ರೀಮತಿ ರೇಣುಕಮ್ಮ ಕಗ್ಗಲಗೌಡ್ರ ಎಮ್ ಕೆ ಕಳ್ಳಿಮಠ ಗುರುಗಳಿಗೆ ಹಾಗೂ ಎಸ್ ಆರ್ ಶಿರಹಟ್ಟಿ ಪ್ರಾಧ್ಯಾಪಕರಿಗೆ ಸನ್ಮಾನಿಸಲಾಯಿತು.





31/08/2023 ರಂದು ಅರಳು ವಿಶೇಷ ಮಕ್ಕಳ ಶಾಲೆಯಲ್ಲಿ ಮಕ್ಕಳೇ ತಯಾರಿಸಿದ ರಕ್ಷಾಬಂಧನದಿಂದ ಎಲ್ಲ ವಿಶೇಷ ಮಕ್ಕಳು ಸಿಬ್ಬಂದಿಯವರು ಸೇರಿ ರಕ್ಷಾ ಬಂಧನ ಆಚರಣೆ ಮಾಡಿ ಸಿಹಿ ವಿತರಣೆ ಮಾಡಲಾಯಿತು.




ಮನೋರೋಗ ತಜ್ಞರಾದ ಶ್ರೀಯುತ ರಾಘವೇಂದ್ರ ಪಾಟೀಲ ಹಾಗೂ ಸಿಬ್ಬಂದಿಯವರು ವಿಶೇಷ ಮಕ್ಕಳ ಶಾಲೆಗೆ ಆಗಮಿಸಿ ಮಕ್ಕಳ ತಪಾಸಣೆ ಮಾಡಿ ಸಲಹೆ ನೀಡುವರು.



**ದಿನಾಂಕ:01/09/2023 ರಂದು ಅರಳು ವಿಶೇಷ ಮಕ್ಕಳ ಶಾಲೆಗೆ ಮನೋವೈಧ್ಯರಾದ ಡಾ|| ರಾಘವೇಂದ್ರ ಪಾಟೀಲ ಹಾಗೂ ಅವರ ತಂಡ ಭೇಟಿ ನೀಡಿ ಮಕ್ಕಳಿಗೆ ತಪಾಸಣೆ ಹಾಗೂ ಮಕ್ಕಳ ಪಾಲಕರಿಗೆ ಮಕ್ಕಳ ನಿರ್ವಹಣೆ ಕುರಿತು ತರಬೇತಿ ನೀಡಿದರು.**




**ದಿನಾಂಕ:05/09/2023 ರಂದು ಶಿಕ್ಷಕರ ದಿನಾಚರಣೆ ಆಚರಿಸಿದೆವು.ಇಂದು ಕರ್ನಾಟಕ ಪ್ರಜಾಪರ ವೇದಿಕೆ ಹಾಗೂ ಗಂಧದಗುಡಿ ಬಳಗದ ಅಧ್ಯಕ್ಷರಾದ ಹಸನ್ ತಹಶೀಲ್ದಾರ** ಹಾಗೂ ಸಂಸ್ಥೆಯ ಸದಸ್ಯರೆಲ್ಲರು ಬಂದು ವಿಶೇಷ ಶಿಕ್ಷಕರಿಗೆ ಸನ್ಮಾನಿಸಿ ವಿಶೇಷ ಮಕ್ಕಳ ಸೇವೆ ಮಾಡುತ್ತಿರುವ ಅರಳು ಶಾಲೆಯ ಕಾರ್ಯ ಶ್ಲಾಘನೀಯ ಇಂದು ವಿಶೇಷ ಶಿಕ್ಷರನ್ನು ಗೌರವಿಸಿ ಸನ್ಮಾನಿಸಲು ಅವಕಾಶ ಸಿಕ್ಕಿರುವುದು ನಮ್ಮ ಸೌಭಾಗ್ಯ ಸಾಮಾನ್ಯ ಮಕ್ಕಳನ್ನು ನೋಡಿಕೋಳ್ಳುವುದೇ ಕಷ್ಟ ಅಂತದ್ದರಲ್ಲಿ ವಿಶೇಷ ಮಕ್ಕಳಿಗೆ ತಾಯಿಯಂತೆ ಸಲಹುತ್ತಿರುವ ಸಂಸ್ಥಾಪಕರಾದ ನೀಲಮ್ಮ ದಾಸಪ್ಪನವರ ಇವರಿಗೆ ಇವರ ಸಿಬ್ಬಂದಿಯವರಿಗೆ ಧನ್ಯವಾದಗಳು ಎಂದರು ಇದೇ ಸಂಧರ್ಭದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ ಲಕ್ಷ್ಮೇಶ್ವರ ತಾಲ್ಲೂಕು ದಂಡಾಧೀಕಾರಿಗಳಾದ ಶ್ರೀಯುತ ಆನಂದಶೀಲ ಅವರು ಮಾತನಾಡಿ ವಿಶೇಷ ಶಿಕ್ಷಕರಿಗೆ ಎಷ್ಟು ಧನ್ಯವಾದ ತಿಳಿಸಿದರು. ಕಡಿಮೇಯೇ ದೈವಸ್ವರೂಪ ಮಕ್ಕಳ ಸೇವೆ ಮಾಡುತ್ತಿರುವುದು ಪುಣ್ಯದ ಕಾರ್ಯ ಎಂದರು.



ದಿನಾಂಕ:05/09/2023 ರಂದು ಅರಳು ವಿಶೇಷ ಮಕ್ಕಳ ಶಾಲೆಗೆ ಲಕ್ಷ್ಮೇಶ್ವರದ ಮಾನ್ಯ ತಹಶೀಲ್ದಾರರಾದ ಶ್ರೀಯುತ ಆನಂದಶೀಲ ಅವರು ಬೇಟಿ ನೀಡಿ ಮಕ್ಕಳೊಂದಿಗೆ ಮಾತನಾಡುತ್ತಿರುವುದು.ಸಂಸ್ಥೆಯ ಪರವಾಗಿ ಮಾನ್ಯ ತಹಶೀಲ್ದಾರರಿಗೆ ಸನ್ಮಾನಿಸಲಾಯಿತು.






ಅರಳು ಸಂಸ್ಥೆಯ ವತಿಯಿಂದ ಶ್ರೀ ಸಿದ್ದೇಶ್ವರ ಶ್ರೀಗಳ ಸ್ಮರಣಾರ್ಥ ವನಮಹೋತ್ಸವ ಕಾರ್ಯಕ್ರಮದ ಭಾವಚಿತ್ರಗಳು



ದಿನಾಂಕ:05/09/2023 ರಂದು ಅರಳು ವಿಶೇಷ ಮಕ್ಕಳ ಶಾಲೆಗೆ ಲಕ್ಷ್ಮೇಶ್ವರದ ಮಾನ್ಯ ತಹಶೀಲ್ದಾರರಾದ ಶ್ರೀಯುತ ಆನಂದಶೀಲ ಅವರು ಬೇಟಿ ನೀಡಿ ಮಕ್ಕಳೊಂದಿಗೆ ಮಾತನಾಡುತ್ತಿರುವುದು.ಸಂಸ್ಥೆಯ ಪರವಾಗಿ ಮಾನ್ಯ ತಹಶೀಲ್ದಾರರಿಗೆ ಸನ್ಮಾನಿಸಲಾಯಿತು.







ಅರಳು ಸಂಸ್ಥೆಯ ವತಿಯಿಂದ ಶ್ರೀ ಸಿದ್ದೇಶ್ವರ ಶ್ರೀಗಳ ಸ್ಮರಣಾರ್ಥ ವನಮಹೋತ್ಸವ ಕಾರ್ಯಕ್ರಮದ ಭಾವಚಿತ್ರಗಳು

## ಅರಳು ವಿಶೇಷ ಮಕ್ಕಳ ಶಾಲೆಯಲ್ಲಿ ಪರಮಪೂಜ್ಯ ಶ್ರೀ ಶಿದ್ದೇಶ್ವರ ಶ್ರೀಗಳವರ ಸ್ಮರಣಾರ್ಥ ವನಮಹೋತ್ಸವ ಹಾಗೂ ಗುರುವಂದನಾ ಕಾರ್ಯಕ್ರಮ

ಅರಳು ವಿಶೇಷ ಅಗತ್ಯತೆಯುಳ್ಳ ಬುದ್ದಿಮಾಂಧ್ಯ ಮಕ್ಕಳ ವಸತಿರಹಿತ ಶಾಲೆ ಲಕ್ಷ್ಮೇಶ್ವರ ಅರಣ್ಯ ಇಲಾಖ್ಯೆ ಹಾಗೂ ತೋಟಗಾರಿಕೆ ಇಲಾಖೆ ಲಕ್ಷ್ಮೇಶ್ವರ ಇವ ರ ಸಹಯೋಗದೊಂದಿಗೆ ವನಮಹೋತ್ಸವ ಕಾರ್ಯಕ್ರಮ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ದಿನಾಂಕ:೨೭/೦೭/೨೦೨೩ರಂದು ಹಮ್ಮಿಕೋಳ್ಳಲಾಯಿತು. ಡಾ|| ಶಂಕರ ಎಸ್ ಶಿರಹಟ್ಟಿ ಪ್ರಾಶುಂಪಾಲರು ಸರಕಾರಿ ಪ್ರಥಮದರ್ಜೆ ಕಾಲೇಜು ಶಿರಹಟ್ಟಿ ಮಾತನಾಡಿ ನಮ್ಮ ಕಾಲೇಜಿನ ವಿಧ್ಯಾರ್ಥಿನಿ ಇಂತಹ ವಿಶೇಷ ಮಕ್ಕಳ ಸೇವೆ ಮಾಡುತ್ತಿರುವುದು ಗುರುಗಳಾದ ನಮಗೆ ಹೆಮ್ಮೆ ಪಡುವ ವಿಷಯ ಅದರರೋಟ್ಟಿಗೆ ಶ್ರೀ ಶಿದ್ದೇಶ್ವರ ಶ್ರೀಗಳ ಸ್ಮರಣಾರ್ಥ ವನಮಹೋತ್ಸವ ಕಾರ್ಯಕ್ರಮ ಹಮ್ಮಿಕೋಳ್ಳಲಾಗಿದ್ದು ಪರಿಸರ ಸಂರಕ್ಷಣೆ ವಿಶೇಷ ಮಕ್ಕಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಇಲಾಖೆಯ ಸಹಾಯವಿಲ್ಲದೆ ಸಾಕಷ್ಟು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಸಂಸ್ಥೆಗೆ ಸರಕಾರ ಅನುದಾನ ನೀಡಿ ವಿಶೇಷ ಮಕ್ಕಳ

ಅಭಿವೃದ್ದೀಗೆ ಸಹಕರಿಸಬೇಕು ಎಂದರು. ಶ್ರೀಯುತ ಸುರೇಶ ಕುಂಬಾರ ಹಿರಿಯ ತೋಟಗಾರಿಕಾ ಸಹಾಯಕ ನಿರ್ದೆಶಕರು ಶಿರಹಟ್ಟಿ ಅವರು ಮಾತನಾಡಿ ವಿಶೇಷ ಮಕ್ಕಳ ಸೇವೆಯಲ್ಲಿ ತೊಡಗಿರುವ ದಾಸಪ್ಪನವರ ಕುಟುಂಬದವರ ಕಾರ್ಯ ಶ್ಲಾಘನೀಯ ಇಂತಹ ದೈವ ಸ್ವರೂಪಿ ಮಕ್ಕಳ ಸೇವೆ ಮಾಡುತ್ತಿರು ಇವರ ಕುಟುಂಬಕ್ಕೆ ನಾವೆಲ್ಲರು ಕೈಜೋಡಿಸಬೇಕು, ನಡೆದಾಡುವ ದೇವರು ಶ್ರೀ ಶಿದ್ದೇಶ್ವರ ಶ್ರೀಗಳವರ ಸ್ಮರಣಾರ್ಥ ವನಮಹೋತ್ಸವದಂತಹ ಉತ್ತಮ ಕಾರ್ಯಗಳನ್ನು ಹಮ್ಮಿಕೊಂಡಿರುವುದು ಸಂತಸ ತಂದಿದೆ, ಪರಿಸರ ಸಂರಕ್ಷಣೆ ಪ್ರತಿಯೋಬ್ಬರ ಜವಾಬ್ದಾರಿ ಎಂದರು ಪಾಲಕರು ತಾಯಂದಿರು ಕೈತೋಟ ,ಟೆರಸ್ ಗಾರ್ಡನ್, ಪೌಷ್ಟಿಕ ತೋಟ ಹಾಗೂ ಕುಂಡ ಕೃಷಿ ಮಾಡುವ ಮೂಲಕ ಆರೋಗ್ಯ ಮತ್ತು ಸಮಯದ ಸದುಪಯೋಗ ಪಡಿಸಿಕೋಳ್ಳುವುದರ ಜೊತೆಗೆ ಪರಿಸರ ರಕ್ಷಿಸುವ ಕಾರ್ಯವನ್ನು ಪ್ರತಿಯೊಬ್ಬರು ರೂಢಿಸಿಕೋಳ್ಳಬೇಕು,. ಮುಖ್ಯ ಅಥಿತಿಗಳಾಗಿ ಶ್ರೀ ಪುಲಕೇಶಿ ಉಪನಾಳ ಅಧ್ಯಕ್ಷರು ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ಲಕ್ಷ್ಮೇಶ್ವರ ಇವರು ಮಾತನಾಡಿ ವಿಶೇಷ ಮಕ್ಕಳಾಗಿರುವುದು ಮಕ್ಕಳ ಭಾಗ್ಯ ಈ ಮಕ್ಕಳಲ್ಲಿ ಸ್ವಾರ್ಥ ಕಪಟತನ ದ್ವೇಷದಂತಹ ಕೆಟ್ಟ ಗುಣಗಳು ಇರುವುದಿಲ್ಲ ಇಂತಹ ಮಕ್ಕಳ ಕಾರ್ಯ ಮಾಡುತ್ತಿರುವ ಅರಳು ಸಂಸ್ಥೆಗೆ ಇಲಾಖೆ ಅನುದಾನ ನೀಡಿ ಮಕ್ಕಳ ಸರ್ವತೋಮುಖ ಅಭಿವೃದ್ದೀಗೆ ಸಹಕರಿಸಬೇಕು ಎಂದರು. ಶ್ರೀಮತಿ ರೇಣುಕಮ್ಮ ಕಗ್ಗಲಗೌಡ್ರು ನಿವೃತ ಶಿಕ್ಷಕಿಯರು ಲಕ್ಷ್ಮೇಶ್ವರ ಮಾತನಾಡಿ ನಾನೂ ದೇವಸ್ಥಾನ ಸುತ್ತಿದರು ದೇವರನ್ನು ಕಂಡಿದ್ದು ಇಲ್ಲಿಯೇ ನನಗೆ ಇಂದು ಈ ಮಕ್ಕಳ ಜೊತೆ ಕಳೆದ ಪ್ರತಿಯೊಂದು ಕ್ಷಣವು ಅಮೂಲ್ಯ ಎಂದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ನೀಲಮ್ಮ ದಾಸಪ್ಪನವರ ಮಾತನಾಡಿ ಪರಮಪೂಜ್ಯ ಶ್ರೀ ಶಿದ್ದೇಶ್ವರ ಶ್ರೀಗಳವರ ಸ್ಮರಣಾರ್ಥ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೋಳ್ಳಲಾಗಿದ್ದು ಇದು ಪೂಜ್ಯರ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಎಸ್ ಡಿ ಹೊಸಮನಿ ಅವರ ಕನಸು ಇಂದು ಆ ಕನಸು ಈ ದೈವ ಸ್ವರೂಪ ಮಕ್ಕಳು ಹಾಗೂ ಪಾಲಕರು ನಮ್ಮ ಗುರುಗಳ ಸಮ್ಮುಖದಲ್ಲಿ ನೆರವೇರಿದ್ದು ಸಂತಸ ತಂದಿದೆ ನಮ್ಮ ಗುರುಗಳಾದ ಡಾ|| ಎಸ್ ಆರ್ ಶಿರಹಟ್ಟಿಯವರು ಇಂತಹ ಕಾರ್ಯಕ್ರಮದ ಉದ್ಘಾಟಕರಾಗಿದ್ದು ನಮ್ಮ ಭಾಗ್ಯ.ಕಳೆದ ಒಂಬತ್ತು ವರ್ಷಗಳೀಂದ ಅರಳು ಸಂಸ್ಥೆ ವಿಶೇಷ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದು ತಮ್ಮೆಲ್ಲರ ಸಹಾಯ ಸಹಕಾರ ಯಾವತ್ತು ಹೀಗೆ ಇರಲಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅರಳು ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀಮತಿ ನೀಲಮ್ಮ ದಾಸಪ್ಪನವರ ಉದ್ಘಾಟಕರಾಗಿ ಡಾ|| ಎಸ್ ಆರ್ ಶಿರಹಟ್ಟಿ ಪ್ರಾಂಶುಪಾಲರು ಸರಕಾರಿ ಪ್ರಥಮದರ್ಜೆ ಕಾಲೇಜು ಶಿರಹಟ್ಟಿ ಮುಖ್ಯೆ ಅಥಿತಿಗಳಾಗಿ ಶ್ರೀ ಸುರೇಶ ಕುಂಬಾರ ಹಿರಿಯ ತೋಟಗಾರಿಕಾ ಸಹಾಯಕ ನಿರ್ದೆಶಕರು ಶಿರಹಟ್ಟಿ, ಶ್ರೀ ಪುಲಕೇಶಿ ಉಪನಾಳ ಅಧ್ಯಕ್ಷರು ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿ ಲಕ್ಷ್ಮೇಶ್ವರ ಸನ್ಮಾನಿತರು ಶ್ರೀಮತಿ ರೇಣುಕಮ್ಮ ಕಗ್ಗಲಗೌಡ್ರು ನಿವೃತ ಶಿಕ್ಷಕಿಯರು ಲಕ್ಷ್ಮೇಶ್ವರ ಎಮ್ ಕೆ ಕಳ್ಳಿಮಠ ಗುರುಗಳು ಹಾಗೂ ಡಾ|| ಎಸ್ ಆರ್ ಶಿರಹಟ್ಟಿ ಪ್ರಾಂಶುಪಾಲರು ಇವರಿಗೆ ಗುರುವಂದನೆ ಸಲ್ಲಿಸಲಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಕಾವ್ಯ ಪ್ರಕಾಶ ವಡಕಣ್ಣವರ ನಿರೂಪಿಸಿದರು,ಪ್ರಾಸ್ತಾವಿಕ ನುಡಿ ಶ್ರೀಮತಿ ನೀಲಮ್ಮ ದಾಸಪ್ಪನವರ ವಂದನಾರ್ಪಣೆ ಶ್ರೀಮತಿ ಅಕ್ಕಮ್ಮ ಕೋರದಾಳ ವಿಶೇಷ

ಶಿಕ್ಷಕರಾದ ಶ್ರೀಮತಿ ಲಲಿತಾ ದಾಸಪ್ಪನವರ,ಗೌರಮ್ಮ ಹಿರೇಮಠ, ಮಲ್ಲಪ್ಪ ಹೊಂಗಲ್ 37 ವಿಶೇಷ ಮಕ್ಕಳು ಹಾಗೂ ಪಾಲಕರು ಹಾಜರಿದ್ದರು.






**ದಿವಂಗತ ರಾಜೇಶ ಆದಿ ಅವರ ಹುಟ್ಟುಹಬ್ಬವನ್ನು ಅರಳು ವಿಶೇಷ ಮಕ್ಕಳ ಶಾಲೆಯಲ್ಲಿ ಸಸಿ ನೆಡುವ ಹುಟ್ಟುಹಬ್ಬ ಆಚರಣೆ ಮಾಡಲಾಯಿತು.**

ದಿನಾಂಕ:26/08/2023 ರಂದು


ದಿವಂಗತ ರಾಜೇಶ ಆದಿ ಅವರ ಹುಟ್ಟುಹಬ್ಬವನ್ನು ಅರಳು ವಿಶೇಷ ಅಗತ್ಯತೆಯುಳ್ಳ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ಲಕ್ಷ್ಮೇಶ್ವರದ ಮಕ್ಕಳೊಂದಿಗೆ ಆದಿ ಕುಟುಂಬದವರು ನಿವೃತ್ತ ಶಿಕ್ಷಕರಾದ ಶ್ರೀಮತಿ ಸರೋಜಕ್ಕ ಬನ್ನೂರ , ಕಿರಣ ನವಲೆ ,ನಾರಾಯಣ ಪವಾರ, ಬಾಳೇಶ್ವರಮಠ ಮಕ್ಕಳಿಗೆ ಸಿಹಿ ವಿತರಿಸಿದರು ಈ ಸಂದರ್ಭದಲ್ಲಿ ಶ್ರೀಮತಿ ಸರೋಜಮ್ಮ ಬನ್ನೂರ ನಿವೃತ್ತ ಶಿಕ್ಷಕರು ಮಾತನಾಡಿ ಇಂತಹ ವಿಶೇಷ ಶಾಲೆ ನಮ್ಮ ಲಕ್ಷ್ಮೇಶ್ವರದಲ್ಲಿ ಪ್ರಾರಂಭಿಸಿದ್ದು ಲಕ್ಷ್ಮೇಶವರದ ನಮ್ಮ ನಿಮ್ಮೆಲ್ಲರ ಭಾಗ್ಯ ಇಂತಹ ವಿಶೇಷ ಮಗು ಇರುವ ಕುಟುಂಬದಲ್ಲಿ ತಾಯಿಯ ನೋವು ಸಂಕಟ ಹೇಳತೀರದು ಅಂತಹ ದೀನ ದಲಿತರ ಸೇವೆ ಅಂತಹ ಕುಟುಂಬದವರಿಗೆ ಈ ಸಂಸ್ಥೆ ಆಸರೆ ಆಗಿದ್ದು ಅಂತಹ ಕುಟುಂಬದವರ ಪಾಲಿಗೆ ಅರಳು ಸಂಸ್ಥೆ ದಾರಿದೀಪವಾಗಿದೆ ಇಂತಹ ವಿಶೇಷ ಮಕ್ಕಳ ಸೇವೆಯಲ್ಲಿ ತೊಡಗಿರುವ ದಾಸಪ್ಪನವರ ಕುಟುಂಬದ ಕಾರ್ಯ ವಿಶೇಷ ಶಿಕ್ಷಕರ ಸೇವೆ ಶ್ಲಾಘನೀಯ ಎಂದರು.ಕಿರಣ ನವಲೆಯವರು ಈ ಒಂದು ಕಾರ್ಯಕ್ರಮ ಅರ್ಥಪೂರ್ಣವಾದದ್ದು ಈ ಮಕ್ಕಳನ್ನು ಗುರುತಿಸಿ ವಿಶೇಷ ಮಕ್ಕಳ ಸೇವೆಯಲ್ಲಿ ತೊಡಗಿರುವ ದಾಸಪ್ಪನವರ ಕುಟುಂಬಕ್ಕೆ ದೇವರು ಇನ್ನಷ್ಟು ಶಕ್ತಿ ನೀಡಲಿ ನಾವೆಲ್ಲ ನಿಮ್ಮೊಂದಿಗೆ ಇದ್ದೇವೆ ಎಂದರು. ನಾರಾಯಣ ಪವಾರ ಅವರು ಮಾತನಾಡಿ ವಿಶೇಷ ಮಕ್ಕಳ ಸೇವೆಯಲ್ಲಿರುವ ಅರಳು ಸಂಸ್ಥೆಗೆ ದೀರ್ಘದಂಡ ನಮಸ್ಕಾರಗಳು ನಮ್ಮ ಲಕ್ಷ್ಮೇಶ್ವರ ಪಟ್ಟಣದಲ್ಲಿ ಎಲ್ಲ ರೀತಿಯ ಸಾಮಾನ್ಯ

ಶಾಲೆಗಳಿದ್ದು ನೋಡಿದ್ದೆವೆ. ಇಂದು ವಿಶೇಷ ಶಾಲೆ ಪ್ರಾರಂಭಿಸಿರುವುದು ನಮಗೆ ಸಂತಸ ತಂದಿದೆ ಎಂದರು ಬಾಳೇಶ್ವರಮಠ ಪ್ರಾಧ್ಯಾಪಕರು ಮಾತನಾಡಿ ಅರಳು ಶಾಲೆಯ ಕಾರ್ಯಕ್ರಮಗಳಿಗೆ ನಾನು ಸಾಕಷ್ಟು ಸಾರಿ ಬಂದಿದ್ದೇನೆ. ಬಹಳ ಉತ್ತಮವಾಗಿ ಶಾಲೆಯನ್ನು ನಡೆಸುತ್ತಿದ್ದಾರೆ ವಿಶೇಷ ಮಕ್ಕಳು ಸ್ವತಂತ್ರವಾಗಿ ಕಂಪ್ಯೂಟರ್ ಹೂ,ಹೂಮಾಲೆ ,ಕವರಿಂಗೆ ಲೆಟರ್,ಫಿನಾಯಿಲ್ ಹಾಗೂ ಜುವ್ಯಲರಿಗಳನ್ನು ತಯಾರಿಸುತ್ತಾರೆ ಈ ನಿಟ್ಟಿನಲ್ಲಿ ಶಿಕ್ಷಕರ ತಾಳ್ಮೇ ಸೇವೆ ಮಹತ್ತರವಾದ್ದು ಎಂದರು.ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ನೀಲಮ್ಮ ದಾಸಪ್ಪನವರ ಮಾತನಾಡಿ ತಾಲ್ಲೂಕಿನಾಧ್ಯಂತ 246 ವಿಶೇಷ ಮಕ್ಕಳಿದ್ದು ಈ ಎಲ್ಲ ವಿಶೇಷ ಮಕ್ಕಳನ್ನು ಶೈಕ್ಷಣಿಕ ವ್ಯಾಪ್ತಿಗೆ ಒಳಪಡಿಸುವ ಗುರಿ ಹೊಂದಿದ್ದು ಸರಕಾರ ಹಾಗೂ ಸಮಾಜ ಈ ಒಂದು ಕಾರ್ಯಕ್ಕೆ ಸಹಾಯ ಸಹಕಾರ ನೀಡುವುದು ಅಗತ್ಯವಾಗಿದೆ ಎಂದರು.ಹುಟ್ಟುಹಬ್ಬದ ನಿಮಿತ್ತ ಸಸಿ ನೆಟ್ಟು ಪರಿಸರ ಜಾಗೃತಿ ನಮ್ಮೆಲ್ಲರ ಹೊಣೆ ಯಾವುದೆ ಕಾರ್ಯಕ್ರಮದ ಪೂರ್ವದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮ ನೆರವೇರಿಸುವುದು ಸಂಸ್ಥೆಯ ಕಾರ್ಯಗಳಲ್ಲೊಂದು ಎಂದರು ಎಲ್ಲರು ಮಕ್ಕಳೊಂದಿಗೆ ಸೇರಿ ಕಳೆದ ಈ ದಿನ ಸಂತಸ ತಂದಿದೆ ಎಂದರು .




ಡಾ|| ರಾಘವೇಂದ್ರ ಪಾಟೀಲ್ ಮನೋವೈಧ್ಯರು ಹಾಗೂ ಕ್ಲೀನಿಕಲ್ ಸೈಕಾಲಜಿಸ್ಟ್ ಹಾಗೂ ಸಿಬ್ಬಂದಿಯವರು ದಿನಾಂಕ:೦೧/೦೯/೨೦೨೩ ರಂದು ಶುಕ್ರವಾರ ಅರಳು ವಿಶೇಷ ಅಗತ್ಯತೆಯುಳ್ಳ ಬುದ್ದಿಮಾಂಧ್ಯ ಮಕ್ಕಳ ವಸತಿರಹಿತ ಶಾಲೆ ಲಕ್ಷ್ಮೇಶ್ವರದ ವಿಶೇಷ ಮಕ್ಕಳಿಗೆ ಆರೋಗ್ಯ ತಪಾಸಣೆ ಮಾಡಿ ಪಾಲಕರು ಮಕ್ಕಳಿಗೆ ತಪ್ಪದೆ ದೈಹಿಕ ವ್ಯಾಯಾಮ ಹಾಗೂ ಮಾತಿನ ವ್ಯಾಯಾಮ ಥೆರಫಿ ಮಾಡುವಂತೆ ತಿಳಿಸಿದರು.ವಿಶೇಷ ಮಕ್ಕಳ ಪಾಲಕರು ಮಕ್ಕಳು ಹಾಗೂ ನೂತನಾ ಹೊಸಮನಿ, (ಸೈಕ್ಯಾಟ್ರಿಕ್ ನರ್ಸ) (ಕಮ್ಯೂನಿಟಿ ನರ್ಸ) ಶೋಭಾ ವಡ್ಡರ ಹಾಗೂ ಕ್ಲಿನಿಕಲ್ ಸೈಕಾಲಜಿಸ್ಟ ಆಗಿರುವ ಶ್ರೀಧರ ಎಮ್ ಸಿ.(ಡಿ.ಎಮ್ ಎಚ್.ಪಿ ಗದಗ) ವಿಶೇಷ ಮಕ್ಕಳು ಸಿಬ್ಬಂದಿಯವರು ಹಾಜರಿದ್ದರು.






**ಅರಳು ವಿಶೇಷ ಶಿಕ್ಷಕರಿಂದ ಸಸಿ ನೆಡುವ ಮೂಲಕ ಶಿಕ್ಷಕರ ದಿನಾಚರಣೆ ಆಚರಿಸಲಾಯಿತು.**

05/09/2023 ರಂದು ಗಂಧದಗುಡಿ ಬಳಗ ರಿ ಜಿಲ್ಲಾ ಘಟಕ ಗದಗ, ಕರ್ನಾಟಕ ಪ್ರಜಾಪರ ವೇದಿಕೆ ಶಿರಹಟ್ಟಿ ಇವರ ಸಂಯುಕ್ತಾಶ್ರಯದಲ್ಲಿ ಅರಳು ವಿಶೇಷ ಅಗತ್ಯತೆಯುಳ್ಳ ಬುದ್ದಿಮಾಂಧ್ಯ ಮಕ್ಕಳ ವಸತಿರಹಿತ ಶಾಲೆ ಲಕ್ಷ್ಮೇಶ್ವರದಲ್ಲಿ ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜಯಂತಿ ನಿಮಿತ್ತ ಶಿಕ್ಷಕರ ಜಯಂತಿಯನ್ನು ವಿಶೇಷ ಶಿಕ್ಷಕರಿಗೆ ಸನ್ಮಾನ ಮಾಡಿ ಸಸಿ ನೆಡುವ ಮೂಲಕಆಚರಣೆ ಮಾಡಿ ಮಕ್ಕಳಿಗೆ ಸಿಹಿ ವಿತರಿಸಿದರು.ಈ ಸಂಧರ್ಭದಲ್ಲಿ ಮಾತನಾಡಿದ ಗಂಧದಗುಡಿ ಬಳಗದ ಅಧ್ಯಕ್ಷರಾದ ಹಸನ್ ತಹಶೀಲ್ದಾರ ಏನು ಅರಿಯದ ವಿಶೇಷ ಮಕ್ಕಳಿಗೆ ಪ್ರತಿಯೋದನ್ನು ಹೇಳಿ ತಾಳ್ಮೆಯಿಂದ ಕಳಿಸುತ್ತಿರುವ ವಿಶೇಷ ಶಿಕ್ಷಕರ ಸೇವೆ ಮಹತ್ತರವಾದದ್ದು ಎಂದರು ಎಂದಿನಂತೆ ಕಾರ್ಯಕ್ರಮದ ಪೂರ್ವದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು.ಈ ಸಂಧರ್ಭದಲ್ಲಿ ಅರಳು ವಿಶೇಷ ಶಾಲೆಯ ಮೂಖ್ಯೋಪಾಧ್ಯಾಯರಾದ ಶ್ರೀಮತಿ ನೀಲಮ್ಮ ದಾಸಪ್ಪನವರ, ವಿಶೇಷ ಶಿಕ್ಷಕರಾದ ಶ್ರೀಮತಿ ಲಲಿತಾ ದಾಸಪ್ಪನವರ ,ಅಕ್ಕಮ್ಮ ಕೊರದಾಳ,ನೇತ್ರಾ ತಳಗೇರಿ,ಮಂಗಳಗೌರಮ್ಮ,ಪಾರ್ವತಿ ಬಳ್ಳೊಳ್ಳಿ,ರೂಪಾ ಸಂಟಿ,ಗೌರವ್ವ ಹಿರೇಮಠ, ಚೌಡಮ್ಮ ನಿಂಗರಾಜ ದಾಸಪ್ಪನವರ,ವಿಶೇಷ ಮಕ್ಕಳು ಗಂಧದಗುಡಿ ಬಳಗದ ,ಸುನೀಲಗೌಡ ಪಾಟೀಲ್,ಕಿರಣ ನಡುವುನಕೇರಿ, ಶರೀಫ ಗುಡಿಮನಿ ಮತ್ತಿತರರು ಹಾಜರಿದ್ದರು.



**ಮನೋವೈಧ್ಯರಿಂದ ವಿಶೇಷ ಮಕ್ಕಳ ತಪಾಸಣೆ ಹಾಗೂ ಪಾಲಕರಿಗೆ ನಿರ್ವಹಣೆ ಕುರಿತು ಮಾಹಿತಿ.ದಿನಾಂಕ:07/09/2023 ರಂದು ಅರಳು ಶಾಲೆಯ ವಿಶೇಷ** ಮಕ್ಕಳ ತಪಾಸಣೆ ಮಾಡಿ ಪಾಲಕರಿಗೆ ವಿಶೇಷ ಮಕ್ಕಳ ನಿರ್ವಹಣೆ ಹಾಗೂ ಪಾಲಕರ ಸಮಸ್ಯಗಳಿಗೆ ಸಲಹೆ ನೀಡಿದರು.36 ವಿಶೇಷ ಮಕ್ಕಳು ಹಾಗೂ ಪಾಲಕರು ಅರಳು ವಿಶೇಷ ಶಾಲೆಯ ಸಿಬ್ಬಂದಿಯವರು ಹಾಜರಿದ್ದರು.



ದಿನಾಂಕ:02/08/2023 ರಂದು ಗದಗ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿಗಳಾದ ಶ್ರೀ ಮಹಾಂತೇಶ ಕೆ ಅರಳು ವಿಶೆಷ ಶಾಲೆಯ ವಿಧ್ಯಾರ್ಥಿಗಳೊಂದಿಗೆ ಸಸಿ ನೆಟ್ಟು ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವ ಅರಳು ಶಾಲೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತ ಪಡಿಸಿದರು.




ದಿನಾಂಕ:06/09/2023 ರಂದು ಗದಗ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿಗಳಾದ ಶ್ರೀ ಮಹಾಂತೇಶ ಕೆ ಅರಳು ಶಾಲೆಗೆ ಭೇಟಿ ನೀಡಿದರು.



**ದಿ:15/08/2023 ರಂದು ಅರಳು ವಿಶೇಷ ಮಕ್ಕಳು ಸಂಭ್ರಮದಿಂದ ಸ್ವಾತಂತ್ರ್ಯೋತ್ಸವವನ್ನು ಆಚರಿಸಿದರು.**





ರಾಜ್ಯದ ಎಲ್ಲ ವಿಶೇಷ ಶಾಲೆಯ ಮುಖ್ಯಸ್ಥರೊಂದಿಗಿನ ಭಾವಚಿತ್ರ. ದಿನಾಂಕ:08/09/2023 ರಂದು ರಾಜ್ಯ ವಿಕಲಚೇತನರ ಸಂಘದ ವತಿಯಿಂದ ದಸರಾ ರಜೆಯನ್ನು ರದ್ದುಗೋಳಿಸಿರುವ ಕುರಿತು ರಾಜ್ಯದ ಎಲ್ಲ ವಿಶೇಷ ಶಾಲೆಗಳ ಮುಖ್ಯಸ್ಥರಿಗೆ ಸಭೆ ಕರೆದು ದಸರಾ ರಜೆ ನೀಡುವಂತೆ ಇಲಾಖೆಗೆ ಮನವಿ ಸಲ್ಲಿಸಲಾಯಿತು.





**ಅಂತರಾಷ್ಟ್ರೀಯ ಪ್ರಜಾಪ್ರಭುತ್ವದಿನ ಆಚರಣೆ ದಿನಾಂಕ:15/09/2023 ಹಾಗೂ ಇಂಜಿನಿಯರ್ಸ್ ಡೇ ಆಚರಿಸಲಾಯಿತು.**ಸಂವಿಧಾನದ ಪ್ರಸ್ತಾವಣೆಯನ್ನು ಓದಿ ಪ್ರಮಾಣ ಮಾಡು ಮೂಲಕ ಪ್ರತೀಜ್ಞೆಯನ್ನು ಶಾಲೆಯ ಎಲ್ಲ ಸಿಬ್ಬಂದಿಯವರು ಮಕ್ಕಳು ಕೈಗೋಳ್ಳಲಾಯಿತು.ಹಾಗೂ ಭಾರತ ಕಂಡ ಮಹಾನ್ ಮೇದಾವಿ ಕನ್ನಡಿಗರ ಹೆಮ್ಮೆಯ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ ಅವರ ಜನ್ಮದಿನ ಪ್ರಯುಕ್ತ ಇಂಜಿನಿಯರ್ ಡೇ ಆಚರಿಸಲಾಯಿತು. ವಿಶೇಷ ಮಕ್ಕಳಿಗೆ ಇಂದು ಸಂವಿಧಾನದ ಮಹತ್ವ ಕುರಿತು ತಿಳಿಸಲಾಯಿತು. ಹಾಗೂ ಸಂಸ್ಥೆಯ ಸಹಯೋಗದಲ್ಲಿರುವ ಎಲ್ಲ ಇಂಜಿನೀಯರ್ಸ್‌ಗಳಿಗೆ ಅರಳು ವಿಶೇಷ ಶಾಲೆಯ ಮಕ್ಕಳು ಸಿಬ್ಬಂದಿಯವರು ಸೇರಿ ಶುಭಾಶಯಗಳನ್ನು ಕೊರಿದರು.



ದಿನಾಂಕ:14/09/2023 ರಂದು ಅರಳು ವಿಶೇಷ ಮಕ್ಕಳ ಶಾಲೆಗೆ ಧರ್ಮಸ್ಥಳ ಸಂಸ್ಥೆಯ ಕಾರ್ಯಕ್ರಮ ಯೋಜನಾಧಿಕಾರಿಗಳಾದ ಶ್ರೀ ವಿನೋದ ಸರ್ ಅವರು ಅರಳು ಶಾಲೆಗೆ ಭೇಟಿ ನೀಡಿದರು.










**ದಿನಾಂಕ:22/09/2023 ರಂದು ಅರಳು ವಿಶೇಷ ಮಕ್ಕಳ ಶಾಲೆಯಲ್ಲಿ ಗೌರಿ ಗಣೇಶ ಹಬ್ಬ ಹಾಗೂ ಶ್ರೀ ಸತ್ಯನಾರಾಯಣ ಪೂಜೆಯನ್ನು** ಅರಳು ಸಂಸ್ಥೆಯ ಅಧ್ಯಕ್ಷರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು. ಪೂಜೆಯಲ್ಲಿ ಅರಳು ವಿಶೇಷ ಮಕ್ಕಳ ಶಾಲೆಯ ಮುದ್ದು ಮಕ್ಕಳು,ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಶ್ರೀ ಸೋಮೇಶ್ವರ ನೂಲಿನಗಿರಣಿಯ ಅಧ್ಯಕ್ಷರಾದ ಪುಲಕೇಶಿ ಉಪನಾಳ ಹಾಗೂ ನಿರ್ದೇಶಕರಾದ ನಂದಾ ಧರ್ಮಾಯತ ಸಿಬ್ಬಂದಿಯವರು ಶಾಂತಿಧಾಮ ವೃದ್ಧಾಶ್ರಮದ ಅಧ್ಯಕ್ಷರಾದ ಪ್ರಕಾಶ ಉಪನಾಳರವರು ವಿಶೇಷ ಮಕ್ಕಳ ಪಾಲಕರು ಪಾಲ್ಗೊಂಡಿದ್ದರು.



ಶ್ರೀ ಸೋಮೇಶ್ವರ ದೇವಸ್ಥಾನದ ಅರ್ಚಕರಾದ ಚಿಕ್ಕಣ್ಣನವರು ಸತ್ಯನಾರಾಯಣ ಪೂಜೆ ನಡೆಸಿಕೊಟ್ಟರು. ಎಲ್ಲ ಮಕ್ಕಳು ಸಂತಸದಿಂದ ಗೌರಿ ಗಣೇಶ ಚತುರ್ಥಿ ಆಚರಿಸಿದರು.



**2/10/2023 ಗಾಂಧೀಜಿಯವರ 154ನೇ ಜಯಂತಿ ಹಾಗೂ ಲಾಲ್ ಬಹಾದ್ದೂರ ಶಾಸ್ತ್ರೀಜಿಯವರ 119ನೇ ಜಯಂತ್ಯೋತ್ಸವವನ್ನು ಅರಳು ವಿಶೇಷ ಮಕ್ಕಳ ಶಾಲೆಯಲ್ಲಿ ಆಚರಿಸಲಾಯಿತು.**



**ದಿನಾಂಕ:05/10/2023ರಂದು ಅರಳು ವಿಶೇಷ ಅಗ್ತ್ರತ್ಯತೆಯುಳ್ಳ ಬುದ್ಧಿಮಾಂಧ್ಯ ಮಕ್ಕಳ ವಸತಿರಹಿತ ಶಾಲೆಯಲ್ಲಿ ಇಂದು ರೈಸ ಬಯೋನಿಕ್ಸ ಬೆಂಗಳೂರು ಇವರ ಸಹಯೋಗದೊಂದಿಗೆ 18 ವರ್ಷದ ಕೆಳಗಿನ ವಿಕಲಚೇತನರ ಅವಶ್ಯಕತೆ ಆಧಾರಿತ ಸಾಧನ ಸಲಕರಣೆಗಳ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಸದಸ್ಯರಾದ ಶ್ರೀಮತಿ ಲಲಿತಾ ದಾಸಪ್ಪನವರ ಉದ್ಘಾಟಕರಾಗಿ ಯೂನಿಟೀ ಬ್ಯಾಂಕ್ ಲಕ್ಷ್ಮೇಶ್ವರದ ಪ್ರಧೀಪಕುಮಾರ ಕೊಕಟನೂರ ನೆರವೇರಿಸಿದರು ಮುಖ್ಯ ಅಥಿತಿಗಳಾಗಿ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳಾದ ಮಹಾಂತೇಶ ಕೆ ಮುಖ್ಯ ಅಥಿತಿಗಳಾಗಿ ಡಾ|| ರಾಘವೇಂದ್ರ ಪಾಟೀಲ್ ಮನೋವೈಧ್ಯರು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ ಗದಗ, ರೈಸ್ ಬಯೋನಿಕ್ಸನ ಸಿ ಇ ಒ ಅರುಣ ಚೆರ್ರೀ ಅಥಿತಿಗಳಾಗಿ ಡಾ|| ಪವನ ಮಹೇಂದ್ರಕರ ಸದಸ್ಯರು ಭಾರತೀಯ ರೆಡ್ಕ್ರಾಸ್ ಸಂಸ್ಥೆಗದಗ ಶಂಕರಣ್ಣ ಬ್ಯಾಡಗಿ ಹಾಗೂ ಎಮ್ ಕೆ ಕಳ್ಳಿಮಠ ಸರ್ ,ರೈಸ್ ಬಯೋನಿಕ್ ಸಂಸ್ಥೆಯ ಎಲ್ಲ ಸಿಬ್ಬಂದಿಯವರು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ ಗದಗ ನ ಕಾರ್ಯಕ್ರಮ ಸಂಯೋಜಕರಾದ ಪ್ರಕಾಶ ಗಾಣಿಗೇರ ತಾಲ್ಲೂಕಿನಾಧ್ಯಂತ ಲಕ್ಷ್ಮೇಶ್ವರ ಸೇರಿದಂತೆ 27 ಗ್ರಾಮಗಳಿಂದ 98 ಕ್ಕೂ ಹೆಚ್ಚು ಮೆದುಳುವಾತ,ಬಹುವಿಧವಿಕಲತೆ,ದೈಹಿಕ ನ್ಯೂನ್ಯತೆ ಹೊಂದಿದ ವಿಕಚೇತನರು ಮತ್ತು ವಿಶೇಷ ಮಕ್ಕಳ ಪಾಲಕರು. ಸಹಸ್ರಾರ್ಜುನ ಬಿ.ಎಡ್ ಕಾಲೇಜಿನ ಪ್ರಶಿಕ್ಷಣಾರ್ಥಿಗಳು ಎಮ್ ಆರ್ ಡಬ್ಲ್ಯು.ಯು.ಆರ್ ಡಬ್ಲ್ಯು ಹಾಗೂ ವಿ.ಆರ್ ಡಬ್ಲ್ಯು ಹಾಜರಿದ್ದರು.





ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಯೂನಿಟೀ ಬ್ಯಾಂಕ್ ಲಕ್ಷ್ಮೇಶ್ವರದ ಪ್ರಧೀಪಕುಮಾರ ಕೊಕಟನೂರ ಲಕ್ಷ್ಮೇಶ್ವರದಲ್ಲಿ ವಿಶೇಷ ಮಕ್ಕಳಿಗಾಗಿ ಸೇವೆ ಸಲ್ಲಿಸುತ್ತಿರುವ ಅರಳು ಸಂಸ್ಥೆಯ ಕಾರ್ಯ ಶ್ಲಾಘನೀಯ ಅತ್ಯಾಧುನಿಕ ತಂತ್ರಜ್ಞಾನದಿಂದ ಮಕ್ಕಳ ಡಿಜಿಟಲ್ ತಪಾಸಣೆ ಮಾಡಿ ವಿಶೇಷ ಮಕ್ಕಳಿಗೆ ಅಗತ್ಯವಾದ ಸಾಧನ ಸಲಕರಣೆಗಳನ್ನು ಒದಗಿಸುತ್ತಿರು ರೈಸ್ ಕಂಪನಿಗೆ ಧನ್ಯವಾದ ತಿಳಿಸಿದರು. ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳಾದ ಮಹಾಂತೇಶ ಕೆ ಮಾತನಾಡಿ ಪ್ರತಿಫಲಾಪೇಕ್ಷೇ ಇಲ್ಲದೆ ಅರಳು ಶಾಲೆಯು ಕಳೆದ ಒಂಬತ್ತು ವರ್ಷಗಳಿಂದ ಇಲಾಖೆಯ ಅನುದಾನವಿಲ್ಲದೆ ಕಾರ್ಯನಿರ್ವಹಿಸುತ್ತಿದ್ದು. ಇಂತಹ ಶಾಲೆ ಜಿಲ್ಲೆಯಲ್ಲಿರುವುದು ನಮ್ಮ ಹೆಮ್ಮೆ ಸಂಸ್ಥೆಯ ಕಾರ್ಯದರ್ಶಿಯವರಾದ ನೀಲಮ್ಮ ದಾಸಪ್ಪನವರ ಸೇವೆಗೆ ಇಲಾಖೆಯ ವತಿಯಿಂದ ಎಷ್ಟು ಧನ್ಯವಾದ ತಿಳಿಸಿದರು ಕಡಿಮೆಯೇ ಸರಕಾರದ ಅನುದಾನಕ್ಕಾಗಿ ನಮ್ಮಿಂದಾದ ಸಹಾಯವನ್ನು ಇಲಾಖೆ ಮಾಡುತ್ತಿದೆ ಎಂದರು. ಡಾ|| ರಾಘವೇಂದ್ರ ಪಾಟೀಲ್ ಮನೋವೈಧ್ಯರು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ ಗದಗ ಇವರು ಅರಳು ಸಂಸ್ಥೆಗೆ ಪ್ರತಿ ತಿಂಗಳಿಗೆ ಎರಡು ಬಾರಿ ತಪಾಸಣೆಗೆ ಬರುತ್ತಿದ್ದು ವಿಶೇಷ ಮಕ್ಕಳಿಗೆ ನೀಡುತ್ತಿರುವ ತರಬೇತಿಯನ್ನು ಗಮನಿಸಿದ್ದೇನೆ ಮಕ್ಕಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು ತಾಯಂದಿರು ಮಕ್ಕಳನ್ನು ಶಾಲೆಗೆ ಸೇರಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೆಂದು ತಿಳಿಸಿದರು. ಶ್ರೀಮತಿ ನೀಲಮ್ಮ ದಾಸಪ್ಪನವರ ಪ್ರಾಸ್ತಾವಿಕವಾಗಿ ಮಾತನಾಡಿ ವಿಶೇಷ ಮಕ್ಕಳು ತಮಗೆ ಸ್ವತಂತ್ರವಾಗಿ ನಡೆದಾಡಲು ಕುಳಿತುಕೊಳ್ಳಲು ಅಗತ್ಯವಾದ ಸ್ಪ್ಲಿಂಟ್ ಕ್ಯಾಲೀಪರ್,ಎ ಎಫ್ ಒ, ಗೇಟರ್ಸ ಅಗತ್ಯ ಸಾಧನ ಸಲಕರಣೆಗಳ ತಪಾಸಣೆಯನ್ನು ಡಿಜಿಟಲ್ ಮೂಲಕ ತಪಾಸಣೆ ಮಾಡಿ ಅತ್ಯಂತ ದುಬಾರಿ ಸಾಧನಸಲಕರಣೆಗಳನ್ನು ರೈಸ್ ಬಯೋನಿಕ್ಸ ಒದಗಿಸುತ್ತಿರುವುದು ನಮ್ಮ ಭಾಗ್ಯ ಪಾಲಕರು ಇದರ

ಸರಿಯಾದ ಬಳಕೆ ಮಾಡಿದಲ್ಲಿ ಮಕ್ಕಳ ಅಭಿವೃದ್ಧಿಗೆ ಅತ್ಯಂತ ಸಹಾಯಕವಾಗಿವೆ ಎಲ್ಲರೂ ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.




**ದಿನಾಂಕ: 07/10/2023 ರಿಂದ 25/10/2023ರ ವರೆಗೆ ಮಕ್ಕಳಿಗೆ ದಸರಾ ರಜೆ ಇರುತ್ತದೆ.**

**25/10/2023 ಎಂದಿನಂತೆ ಶಾಲೆ ಪ್ರಾರಂಭಿಸಲಾಯಿತು.**



**ದಿನಾಂಕ: 28/10/2023ರಂದು ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.** ಕಾರ್ಯಕ್ರಮ ಕುರಿತು ಮಾತನಾಡಿದ ಸಂಸ್ಥೆಯ ವಿಶೇಷ ಶಿಕ್ಷಕರಾದ ಶ್ರೀಮತಿ ಲಲಿತಾ ದಾಸಪ್ಪನವರ ಮಾತನಾಡಿ ಮನುಕುಲವನ್ನು ಉದ್ಧಾರಗೊಳಿಸಲು ರಾಮಾಯಣ ಮಹಾಕಾವ್ಯ ರಚಿಸಿ ಸ್ನೇಹ ಭ್ರಾತೃತ್ವ,ಸಂಸ್ಕೃತಿ,ನೆಲ,ಜಲ,ಮಾನವೀಯತೆ ದೇಶಪ್ರೇಮ ಸತ್ಯ ತ್ಯಾಗ ಶಾಂತಿ ಆದರ್ಶಗಳು ಈ ಕಾವ್ಯದ ಜೀವಾಳವಾಗಿದೆ.ಆದ್ದರಿಂದ ಜಗತ್ತಿಗವ ಆದರ್ಶ ಗ್ರಂಥ ನೀಡಿದ ಮಹಾಕವಿಯನ್ನು ಸ್ಮರಿಸುವ ಮೂಲಕ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು ಕಾರ್ಯಕ್ರಮದ ನಿರೂಪಣ ಶ್ರೀಮತಿ ಅಕ್ಕಮ್ಮ ಕೋರದಾಳ ವಂದನಾರ್ಪಣೆ ಶ್ರೀಮತಿ ಮಂಗಳಗೌರಮ್ಮ ನೇರವೇರಿಸಿದರು ಕಾರ್ಯಕ್ರಮದಲ್ಲಿ ಅರಳು ವಿಶೇಷ ಶಾಲೆಯ ಸಿಬ್ಬಂದಿಯವರು ವಿಧ್ಯಾರ್ಥಿಗಳು ಹಾಜರಿದ್ದರು.